# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಶ್ರೀ ಎಂ.ಬಿ.ತುರಮುರಿ, ಸಹಾಯಕ ನಿರ್ದೇಶಕರು(ಗ್ರಾ.ಉ), ತಾಲ್ಲೂಕು ಪಂಚಾಯತ್, ಬೈಲಹೊಂಗಲ, ಬೆಳಗಾವಿ ಜಿಲ್ಲೆ.ಇವರು ತಮ್ಮ ಸ್ಥಾನ ಪನ್ನ ಮುಂಬಡ್ತಿ ಬಿಟ್ಟುಕೊಟ್ಟಿರುವ ಬಗ್ಗೆ.

ಓದಲಾಗಿದೆ:- 1. ಸರ್ಕಾರದ ಅಧಿಸೂಚನೆ ಸಂಖ್ಯೆ:ಗ್ರಾಅಪ 335 ಪಬವ 2013, ದಿನಾಂಕ:19.10.2013

2. ಅಧಿಕಾರಿಯ ಮನವಿ ದಿನಾಂಕ:10.01.2014

****

**ಪ್ರಸ್ತಾವನೆ:**

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಸಹಾಯಕ ನಿರ್ದೇಶಕರು, (ಗ್ರಾಮೀಣ ಉದ್ಯೋಗ), ರವರುಗಳಿಗೆ ಕಾರ್ಯನಿರ್ವಾಹಕ ಅಧಿಕಾರಿ/ಸಹಾಯಕ ಕಾರ್ಯದರ್ಶಿ, ಪಂಚಾಯತ್ ರಾಜ್ ಹುದ್ದೆಗೆ ಸ್ಥಾನ ಮುಂಬಡ್ತಿಯನ್ನು ಮೇಲೆ (1)ರಲ್ಲಿ ಓದಲಾದ ದಿನಾಂಕ:19.10.2013ರ ಸರ್ಕಾರದ ಅಧಿಸೂಚನೆಯಲ್ಲಿ ನೀಡಲಾಗಿರುತ್ತದೆ. ಸದರಿ ಮುಂಬಡ್ತಿ ಆದೇಶದಲ್ಲಿನ ಕ್ರ.ಸಂ.26,ರಲ್ಲಿನ ಶ್ರೀ ಎಂ.ಬಿ.ತುರಮುರಿ, ಇವರು ತಮಗೆ ನೀಡಿದ ಮುಂಬಡ್ತಿಯನ್ನು ಕೆಲವೊಂದು ಕೌಟುಂಬಿಕ ಹಾಗೂ ವೈಯಕ್ತಿಕ ಕಾರಣಗಳ ನಿಮಿತ್ತ ರದ್ದುಪಡಿಸುವಂತೆ ಹಾಗೂ ತಮ್ಮನ್ನು ಸಹಾಯಕ ನಿರ್ದೇಶಕರು, ತಾಲ್ಲೂಕು ಪಂಚಾಯತ್, ಬೈಲಹೊಂಗಲ, ಬೆಳಗಾವಿ ಇಲ್ಲಿಯೇ ಮುಂದುವರೆಸುವಂತೆ ಮೇಲೆ (2)ರಲ್ಲಿ ಓದಲಾದ ತಮ್ಮ ಮನವಿ ದಿನಾಂಕ:10.01.2014ರಲ್ಲಿ ಕೋರಿರುತ್ತಾರೆ.

ಕರ್ನಾಟಕ ನಾಗರೀಕ ಸೇವಾ(ಸಾಮಾನ್ಯ ನೇಮಕಾತಿ), 1977ರ ನಿಯಮ-4(ಎ)ರ ಪ್ರಕಾರ ಮುಂಬಡ್ತಿಯು ಬೇಡವೆಂದು ಅಧಿಕಾರಿಯು ತಮ್ಮ ಇಚ್ಛೆಯನ್ನು ವ್ಯಕ್ತಪಡಿಸಿದ್ದಲ್ಲಿ ಅಂತಹ ಅಧಿಕಾರಿಯ ಮುಂಬಡ್ತಿಯನ್ನು ಒಂದು ವರ್ಷದ ಅವಧಿಗೆ ಮುಂದೂಡಲು ಅವಕಾಶವಿರುತ್ತದೆ. ಅಧಿಕಾರಿಯ ಕೋರಿಕೆಯು ಸಕಾರಣಗಳಿಂದ ಕೂಡಿರುವುದರಿಂದ ಇವರ ಕೋರಿಕೆಯನ್ನು ಪರಿಗಣಿಸಲು ತೀರ್ಮಾನಿಸಿದೆ. ಆದುದರಿಂದ ಈ ಕೆಳಕಂಡ ಆದೇಶ.

## ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 48 ಪಬವ 2014 ಬೆಂಗಳೂರು ದಿನಾಂಕ:05-03-2014

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ದಿನಾಂಕ:19.10.2013ರ ಸರ್ಕಾರದ ಅಧಿಸೂಚನೆಯಲ್ಲಿ ಶ್ರೀ ಎಂ.ಬಿ.ತುರಮುರಿ, ಸಹಾಯಕ ನಿರ್ದೇಶಕರು(ಗ್ರಾ..ಉ), ತಾಲ್ಲೂಕು ಪಂಚಾಯತ್, ಬೈಲಹೊಂಗಲ, ಬೆಳಗಾವಿ ಜಿಲ್ಲೆ ಇವರಿಗೆ ಕಾರ್ಯನಿರ್ವಾಹಕ ಅಧಿಕಾರಿ/ಸಹಾಯಕ ಕಾರ್ಯದರ್ಶಿ(ಪಂಚಾಯತ್ ರಾಜ್) ಹುದ್ದೆಗೆ ನೀಡಿರುವ ಮುಂಬಡ್ತಿಯನ್ನು ಕರ್ನಾಟಕ ನಾಗರೀಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು-1977ರ ನಿಯಮ4(ಎ)ರ ಪ್ರಕಾರ ಬಿಟ್ಟುಕೊಡಲು (Forego) ಅನುಮತಿ ನೀಡಿದೆ.

1. ಸದರಿ ಅಧಿಕಾರಿಯು ದಿನಾಂಕ:10.01.2014ರಿಂದ ಒಂದು ವರ್ಷದ ಅವಧಿಯ ವರೆವಿಗೆ ಅಥವಾ ನಿಕಟಪೂರ್ವದ ದಿನಾಂಕದಲ್ಲಿ ಇತರೆ ಅಧಿಕಾರಿಗಳಿಗೆ ಕಾರ್ಯನಿರ್ವಾಹಕ ಅಧಿಕಾರಿ / ಸಹಾಯಕ ಕಾರ್ಯದರ್ಶಿ(ಪಂಚಾಯತ್ ರಾಜ್ ಹುದ್ದೆಗೆ ಮುಂಬಡ್ತಿಗೆ ಪರಿಗಣಿಸುವವರೆಗೆ ಇವುಗಳಲ್ಲಿ ಯಾವುದು ನಂತರವೋ ಅಲ್ಲಿಯವರೆವಿಗೂ ಮುಂಬಡ್ತಿಗೆ ಅರ್ಹರಾಗಿರುವುದಿಲ್ಲ.

2. ಸದರಿ ಅಧಿಕಾರಿಯು ಈಗಾಗಲೇ ಬಡ್ತಿ ಹೊಂದಿರುವ ಅಧಿಕಾರಿಗಳ ಪಟ್ಟಿಯಲ್ಲಿನ ತಮ್ಮ ಜೇಷ್ಠತೆಯನ್ನು ಕಳೆದುಕೊಳ್ಳುತ್ತಾರೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು
ಅವರ ಹೆಸರಿನಲ್ಲಿ

(ಚಂದ್ರಶೇಖರ್)
ಸರ್ಕಾರದ ಅಧೀನ ಕಾರ್ಯದರ್ಶಿ(ಸೇವೆಗಳು-ಬಿ&ಸಿ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಇವರಿಗೆ,

1. ಮಹಾಲೇಖಪಾಲರು, ಕರ್ನಾಟಕ ಬೆಂಗಳೂರು.
2. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಬೆಳಗಾವಿ/ಉತ್ತರ ಕನ್ನಡ
3. ಸಂಬಂಧಿಸಿದ ಅಧಿಕಾರಿಗೆ.

ಪ್ರತಿ ಮಾಹಿತಿಗಾಗಿ:

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶೀ, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ಕಾರ್ಯದರ್ಶಿ(ಪಂ.ರಾಜ್)/ಅಪರ ಕಾರ್ಯದರ್ಶಿ (ಆಡಳಿತ) ರವರ ಆಪ್ತ ಶಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆ.
3. ಮೇಲ್ವಿಚಾರಕರು, ಗಣಕ ಕೋಶ, ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆ.
4. ಅಧೀನ ಕಾರ್ಯದರ್ಶಿ & ಶಾಖಾಧಿಕಾರಿ (ಸೇವೆಗಳು-ಸಿ) ಶಾಖೆ, ಗ್ರಾಅಪಂ.ರಾಜ್ ಇಲಾಖೆ.
5. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.